**ಸಾಕ್ಷಿಗೆ ದಿನಾಂಕಃ06-03-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.P.K ವಕೀಲರಿಂದ ::**

ನಾನು ವ್ಯವಸಾಯ ಮಾಡುತ್ತೇನೆ. ಆರೋಪಿತರು ನಮ್ಮ ಮನೆಗೆ ತರಕಾರಿ ತರುತ್ತಿದ್ದುದ್ದರಿಂದ ನಮಗೆ ಅವರ ಪರಿಚಯ ಇದೆ. ನಾನು ಮೂಲತಃ ಶೃಂಗೇರಿ. ಆರೋಪಿತರು ಕೊಪ್ಪ ತಾಲ್ಲೂಕಿನವರು. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ಆರೋಪಿತರು ಸಾಲದ ಹಣ ಬೇಕೆಂದು ಡಿಸೆಂಬರ್ ತಿಂಗಳ 3 ನೇ ವಾರದಲ್ಲಿ ನನಗೆ ಕೇಳಿದ್ದರು ನಾನು ಆರೋಪಿತರಿಗೆ ಸಾಲವನ್ನು ದಿಃ30-12-2022 ರಂದು ನನ್ನ ಮನೆಯಲ್ಲಿ ನೀಡಿರುತ್ತೇನೆ. ಆ ಸಂದರ್ಭದಲ್ಲಿ ನಾನು ಆರೋಪಿತರು ಮತ್ತು ನನ್ನ ಹೆಂಡತಿ ಮನೆಯಲ್ಲಿದ್ದೆವು. ಆರೋಪಿತರು ಪ್ರಶ್ನಿತ ಚೆಕ್ ಅನ್ನು ದಿಃ30-12-2022 ರಂದು ನನಗೆ ಭರ್ತಿ ಮಾಡಿ ನೀಡಿದ್ದರು.

2. ನಾನು ಆರೋಪಿತರಿಗೆ ಸಾಲದ ಹಣವನ್ನು ಬಡ್ಡಿಗೆ ನೀಡಿರಲಿಲ್ಲ. ಆರೋಪಿತರು ಸಾಲದ ಹಣವನ್ನು ಪಡೆದ ನಂತರ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು, ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿದ ನಂತರ ನನಗೆ ಹಣವನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿತರು ಈಗಾಗಲೇ ಸಂಪೂರ್ಣ ಸಾಲದ ಹಣವನ್ನು ನನಗೆ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರಶ್ನಿತ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ದುರ್ಲಾಭ ಪಡೆಯಲು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.